RNU AIR DHARWAD

APRIL 09, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ** ವಿಧಾನಸಭಾ ಕ್ಷೇತ್ರಗಳ, ಉಪ ಚುನಾವಣೆಗೆ, ಇಂದು ಬೆಳಗ್ಗೆ 7 ಗಂಟೆಯಿಂದ, ಸಂಜೆ 6 ಗಂಟೆಯ ವರೆಗೆ, ಮತದಾನ ನಡೆಯಲಿದೆ. ಮಧ್ಯಾಹ್ನ 12 ಗಂಟೆಯ ವರೆಗೆ, ಶಾಂತಿಯುತ ಮತದಾನ ದಾಖಲಾಗಿದೆ.

<><><>

**ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ,** ಕನಗೊಂಡನಹಳ್ಳಿಯ ಮತಗಟ್ಟೆ ಸಂಖ್ಯೆ 66ರ ಮತಯಂತ್ರದಲ್ಲಿ ದೋಷ ಕಂಡುಬಂದ ಪರಿಣಾಮ, ಮತದಾನ ತಡವಾಗಿ ಆರಂಭವಾಗಿದೆ. ಉಳಿದಂತೆ, ಎಲ್ಲ 283 ಮತಗಟ್ಟೆಗಳಲ್ಲಿ, ಶಾಂತಿಯುತ ಮತದಾನ ನಡೆಯುತ್ತಿದೆ. 76 ಸೂಕ್ಷ್ಮ ಮತಗಟ್ಟೆಗಳಲ್ಲಿ, ಹೆಚ್ಚುವರಿ ಪೊಲೀಸ್ ಮತ್ತು ಅರೆ ಸೈನಿಕ ಪಡೆ ನಿಯೋಜಿಸಲಾಗಿದೆ.

<><><>

**ಇಂದು ಬೆಳಗ್ಗೆ 11 ಗಂಟೆಯ ವರೆಗೆ,** ಬಾಗಲಕೋಟೆಯಲ್ಲಿ, ಶೇಕಡ 27 ದಶಾಂಶ 8–3 ರಷ್ಟು ಹಾಗೂ ದಾವಣಗೆರೆಯಲ್ಲಿ, ಶೇಕಡ 22 ದಶಾಂಶ 0–1 ರಷ್ಟು, ಮತದಾನ ವರದಿಯಾಗಿದೆ.

<><><>

**ಪ್ರಸಕ್ತ ಸಾಲಿನ,** ದ್ವಿತೀಯ ಪಿ.ಯು.ಸಿ., ಪ್ರಥಮ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ, ಅಂಕಪಟ್ಟಿಯನ್ನು, National Academic Depository (NAD) – Digi Locker ನಲ್ಲಿ ಲಭ್ಯಗೊಳಿಸಲು, ಸರ್ಕಾರ ಅನುಮತಿಸಿದೆ. ಇಂದು ಮಧ್ಯಾಹ್ನ 3 ಗಂಟೆಗೆ, ಫಲಿತಾಂಶ ಪ್ರಕಟವಾದ ಕೂಡಲೇ, ವಿದ್ಯಾರ್ಥಿಗಳಿಗೆ ತಮ್ಮ ಅಂಕಪಟ್ಟಿ ಲಭ್ಯವಾಗಲಿದೆ. ದೇಶದಲ್ಲಿಯೇ, ಮೊಟ್ಟ ಮೊದಲ ಬಾರಿಗೆ, ಫಲಿತಾಂಶದ ದಿನದಂದೇ, ವಿದ್ಯಾರ್ಥಿಗಳಿಗೆ ಸುಗಮವಾಗಿ ಮತ್ತು ಸಮಯಕ್ಕೆ ಸರಿಯಾಗಿ, ಅಂಕಪಟ್ಟಿ ದೊರೆಯುವಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಕ್ರಮಕೈಗೊಂಡಿದೆ. ಭೌತಿಕ ಅಂಕಪಟ್ಟಿಯ ಪ್ರತಿಯನ್ನು ನೀಡಲು ಸಹ, ಸರ್ಕಾರ ಅನುಮತಿಸಿದೆ. ಆದರೆ 2026–27ನೇ ಶೈಕ್ಷಣಿಕ ಸಾಲಿನಿಂದ, ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಅಂಕಪಟ್ಟಿಯ, ಭೌತಿಕ ಪ್ರತಿ ನೀಡುವ ಪದ್ಧತಿಯನ್ನು ಕೈ ಬಿಡಲಾಗುತ್ತಿದೆ.

<><><>

**ಬಿರು ಬೇಸಿಗೆ ಹಿನ್ನೆಲೆ,** ರಾಯಚೂರು ಜಿಲ್ಲೆಯಲ್ಲಿ, ಕುಡಿಯುವ ನೀರು ಹಾಗೂ ಮೇವಿನ ಲಭ್ಯತೆ ಕುರಿತು, ಜಿಲ್ಲಾ ಉಸ್ತುವಾರಿ ಸಚಿವ, ಡಾಕ್ಟರ್ ಶರಣಪ್ರಕಾಶ ಪಾಟೀಲ ನೇತೃತ್ವದಲ್ಲಿ, ಜಿಲ್ಲೆಯ ಅಧಿಕಾರಿಗಳೊಂದಿಗೆ ಸಭೆ ನಡೆಯಿತು. ನೀರು ಹಾಗೂ ಮೇವಿನ ಪೂರೈಕೆಯಲ್ಲಿ ಸಮಸ್ಯೆಯಾಗದಂತೆ, ಮುನ್ನೆಚ್ಚರಿಕೆ ವಹಿಸಲು, ಸಚಿವರು ಜಿಲ್ಲಾಡಳಿತಕ್ಕೆ ಸೂಚಿಸಿದರು.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ,** 13ನೇ ತಾರೀಖು, ಚಿಕ್ಕಮಗಳೂರು ಜಿಲ್ಲೆಗೆ ಭೇಟಿ ನೀಡಲಿದ್ದು, 150 ಕೋಟಿ ರೂಪಾಯಿ ಮೌಲ್ಯದ, ವಿವಿಧ ಅಭಿವೃದ್ಧಿ ಯೋಜನೆಗಳಿಗೆ, ಶಂಕುಸ್ಥಾಪನೆ ನೆರವೇರಿಸಲ್ಲಿದ್ದಾರೆ ಎಂದು, ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ ತಿಳಿಸಿದ್ದಾರೆ. ನರಸಿಂಹರಾಜಪುರ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ, ಅವರು ಪೂರ್ವಭಾವಿ ಸಭೆ ನಡೆಸಿದರು.

<><><>

**ಧಾರವಾಡದ ಸ್ನೇಹ ಪ್ರತಿಷ್ಠಾನ, ಶಿಕ್ಷಣ ತಜ್ಞ,** ಡಾಕ್ಟರ್ ಗುರುರಾಜ ಕರಜಗಿ ಅವರಿಂದ, ವಸಂತ ವ್ಯಾಖ್ಯಾನ ಮಾಲೆ, ಆಯೋಜಿಸಿದೆ. ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದ, ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ, ನಾಳೆಯಿಂದ ಮೂರು ದಿನಗಳ ಕಾಲ, ಬೆಳಗ್ಗೆ 11 ಗಂಟೆಗೆ, ಈಶಾವಾಸ್ಯ ಉಪನಿಷತ್ ಕುರಿತು ಹಾಗೂ ಸಂಜೆ 6 ಗಂಟೆಗೆ, ಬ್ರಹ್ಮರ್ಷಿ ವಿಶ್ವಾಮಿತ್ರ ವಿಷಯವಾಗಿ, ಉಪನ್ಯಾಸ ನೀಡಲಿದ್ದಾರೆ ಎಂದು, ಹಿರಿಯ ಸಾಹಿತಿ ಹರ್ಷ ಡಂಬಳ, ತಿಳಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಬೆಂಗಳೂರಿನ, ಪ್ರೊಫೆಸರ್ ಗುರುರಾಜ ಕರಜಗಿ, ತಮ್ಮ ಉಪನ್ಯಾಸದ ಕುರಿತು, ಮಾಹಿತಿ ನೀಡಿದ್ದಾರೆ.

<><><>

**ರಾಜ್ಯ ಗಣಿಗಾರಿಕೆ ಪರಿಸರ, ಪುನರುಜ್ಜೀವನ ನಿಗಮ,** ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ, ಒಟ್ಟು 10 ತಾಲೂಕುಗಳನ್ನು, ಗಣಿಬಾಧಿತ ಪ್ರದೇಶಗಳೆಂದು, ಗುರುತಿಸಿದೆ. ಗಣಿಗಾರಿಕೆ ಸಂತ್ರಸ್ತ ಪ್ರದೇಶಗಳ, ಪುನರುಜ್ಜೀವನ ನಿಗಮದ ವ್ಯವಸ್ಥಾಪಕ ನಿರ್ದೇಶಕ, ಸಂಜಯ ಬಿಜ್ಜೂರ, ವಿಜಯನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ, ಸಭೆ ನಡೆಸಿದರು. ಗಣಿಗಾರಿಕೆ ಬಾಧಿತ ಪ್ರದೇಶಗಳ, ಸಮಗ್ರ ಪರಿಸರ ಯೋಜನೆ ಅನುಷ್ಠಾನಕ್ಕೆ, 4 ಸಾವಿರದ ನೂರಾ 7 ಕೋಟಿ ರೂಪಾಯಿ, ಅನುದಾನ ಲಭ್ಯವಿದೆ ಎಂದು, ತಿಳಿಸಿದರು. ವಿವಿಧ ಇಲಾಖೆಗಳ, 99 ಪ್ರಸ್ತಾವಗಳಿಗೆ, ಸಾವಿರದ ಏಳು ನೂರಾ 10 ಕೋಟಿ ರೂಪಾಯಿ ಮೊತ್ತದ, ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ, ಎಂದರು.

<><><>

**ನೈಋುತ್ಯ ರೇಲ್ವೆ, ಬೆಂಗಳೂರು ವಿಭಾಗದ,** ಮಲ್ಲಸಂದ್ರ ಮತ್ತು ಗುಬ್ಬಿ ನಿಲ್ದಾಣಗಳ ನಡುವೆ, ಲೆವೆಲ್ ಕ್ರಾಸಿಂಗ್ ಕಾಮಗಾರಿ ಹಿನ್ನೆಲೆ, ಚಿಕ್ಕಮಗಳೂರು ಯಶವಂತಪುರ; ಕೆ.ಎಸ್.ಆರ್.ಬೆಂಗಳೂರು–ಮೈಸೂರು ಒಡೆಯರ್ ದೈನಂದಿನ ಎಕ್ಸ್‌ಪ್ರೆಸ್ ರೈಲುಗಳ ಸಂಚಾರದಲ್ಲಿ, ಬರುವ 15ನೇ ತಾರೀಖಿನ ವರೆಗೆ ವ್ಯತ್ಯವಾಗಲಿದೆ. ಕೆ.ಎಸ್.ಆರ್.ಬೆಂಗಳೂರು ಹಾಗೂ ಸಿದ್ಧಗಂಗಾ ಎಕ್ಸ್‌ಪ್ರೆಸ್ ರೈಲು, 15ರ ವರೆಗೆ, ರದ್ದಾಗಲಿದ್ದು, ಅರಸಿಕೆರೆಯಿಂದ ಸಂಚರಿಸಲಿದೆ. ಹಲವು ರೈಲುಗಳು ಭಾಗಶಃ ರದ್ದು ಮತ್ತು ಮಧ್ಯದ ನಿಲ್ದಾಣದಲ್ಲಿ ನಿಲುಗಡೆಯಾಗಲಿವೆ. ಪ್ರಯಾಣಿಕರು, ಆಯಾ ರೈಲುಗಳ ವೇಳಾಪಟ್ಟಿ ಹಾಗೂ ತಲುಪುವ ನಿಲ್ದಾಣ ಖಾತ್ರಿ ಪಡಿಸಿಕೊಳ್ಳಲು, ಮೈಸೂರು ವಿಭಾಗೀಯ ವ್ಯವಸ್ಥಾಪಕರು, ಕೋರಿದ್ದಾರೆ.

<><><>

**ಪ್ರಧಾನಮಂತ್ರಿ ಮುದ್ರಾ ಯೋಜನೆ,** ಭಾರತದ ಬೇರುಮಟ್ಟದ ಉದ್ಯಮಿಗಳನ್ನು ಬಲಪಡಿಸುವಲ್ಲಿ, 11 ವ ´ಗಳನ್ನು ಯಶಸ್ವಿಯಾಗಿ ಪೂರೈಸಿದೆ. ಕಾರ್ಪೊರೇಟ್ ಮತ್ತು ಕೃಷಿಯೇತರ ಆದಾಯ ಉತ್ಪಾದನಾ ಚಟುವಟಿಕೆಗಳಿಗಾಗಿ, ಸಣ್ಣ ಪ್ರಮಾಣದ ವ್ಯಾಪಾರ, ಉದ್ಯಮಗಳಿಗೆ, 20 ಲಕ್ಷ ರೂಪಾಯಿ ವರೆಗೆ ಸರಳ, ಸುಲಭ ಮತ್ತು ಭದ್ರತೆ ರಹಿತ ಸಾಲಗಳನ್ನು ನೀಡುಲಾಗುತ್ತದೆ. ಮುದ್ರಾ ಸಾಲಗಳನ್ನು, 'ಶಿಶು', 'ಕಿಶೋರ', 'ತರುಣ' ಮತ್ತು 'ತರುಣ್ ಪ್ಲಸ್' ನಾಲ್ಕು ವಿಭಾಗಗಳಲ್ಲಿ, ವಿಂಗಡಿಸಲಾಗಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**